**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 996/15 CW-01**

**ಸಾಕ್ಷಿಯನ್ನು ದಿಃ 07.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಹೆಸರುಃ | ಕೆ ಯು ನಾಗರಾಜು |
| ತಂದೆಯ ಹೆಸರುಃ | ಕೆ ವೈ ರುದ್ರೇಗೌಡ |
| ವಯಸ್ಸುಃ | 70 ವರ್ಷ |
| ವೃತ್ತಿಃ | ನಿವೃತ್ತ ಎ ಎಸ್ ಐ |
| ವಾಸ ಸ್ಥಳಃ | ಚನ್ನರಾಯಪಟ್ಟಣ, |

**ಮುಖ್ಯವಿಚಾರಣೆ ಪಿರ್ಯಾದಿ ಪರ ಶ್ರೀ ಬಿ ಜೆ ಆರ್ ವಕೀಲರಿಂದಃ**

ಆರೋಪಿತರು ನನಗೆ ಗೊತ್ತು . ನಾನು 1997 ರಲ್ಲಿ ಚನ್ನರಾಯಪಟ್ಟಣದ ಕುವೆಂಪು ನಗರದಲ್ಲಿ ಒಂದು ಖಾಲಿ ನಿವೇಶನ ಪೂರ್ವ ಪಶ್ಚಿಮ 60 ಅಡಿ ಉತ್ತರ ದಕ್ಷಿಣ 43 ಅಡಿ ಖರೀದಿ ಮಾಡಿದ್ದು, ಅದು ನನ್ನ ಹೆಸರಿಗೆ ಪುರಸಭೆಯಲ್ಲಿ ಖಾತೆ ಆಗಿರುತ್ತದೆ . ಸದರಿ ನಿವೇಶನದ ಪೈಕಿ ನಾನು 60X30 ವಿಸ್ತೀರ್ಣದಲ್ಲಿ ಮನೆಯನ್ನು ಕಟ್ಟಿಕೊಂಡು ಉಳಿಕೆ ಜಾಗವನ್ನು ಬಿಟ್ಟುಕೊಂಡಿರುತ್ತೇನೆ . ಸದರಿ ಖಾಲಿ ನಿವೇಶನದ ಮೇಲೆ 8 ಮತ್ತು 9 ನೇ ಆರೋಪಿಗಳ ವಿರುದ್ದ ನಾನು ಹಕ್ಕು ಘೋಷಣೆ ಪರಿಹಾರ ಕೋರಿ ಅ.ದಾ.ಸಂ.38/2008 ಹೂಡಿದ್ದು ಸದರಿ ದಾವೆಯಲ್ಲಿ ನನ್ನ ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ ಹೊರಡಿಸಿದ್ದು , ಅದರ ಜಾರಿಗಾಗಿ ಪೊಲೀಸ್ ರಕ್ಷಣೆ ಆದೇಶವನ್ನು ಸಹ ಮಾಡಲಾಗಿತ್ತು . ಆದರೆ ದಿನಾಂಕ 20.07.2013 ರಂದು 2 ನೇ ಆರೋಪಿ ನನ್ನ ನಿವೇಶನಕ್ಕೆ ತಂಟೆ ತಕರಾರು ಮಾಡಿದ್ದ ಕಾರಣ 9 ನೇ ಆರೋಪಿಗೆ ದೂರು ನೀಡಿ 2 ನೇ ಆರೋಪಿಯ ವಿರುದ್ದ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತೇನೆ

ದಿನಾಂಕ 14.08.2013 ರಂದು ನಾನು ಕರ್ತವ್ಯದ ನಿಮಿತ್ತ ಹಿರಿಸಾವೆಗೆ ತೆರಳಿದ್ದು , ಆ ಸಮಯದಲ್ಲಿ 1 ನೇ ಆರೋಪಿಯು ಉಳಿದ ಆರೋಪಿಗಳ ಜೊತೆ ಅಕ್ರಮ ಕೂಟ ಕಟ್ಟಿಕೊಂಡುಬಂದು ನನ್ನ ಖಾಲಿ ನಿವೇಶನಕ್ಕೆ ಹಾಕಿದ್ದ ತಂತಿಬೇಲಿಯನ್ನು ಕೀಳಲು ಪ್ರಯತ್ನಿಸಿದ್ದು , ಆಗ ನನ್ನ ಹಿರಿಯ ಮಗ ಕೆ ಎನ್ ಸುಂದರ್ ರಾಜ್ ರವರು ನ್ಯಾಯಾಲಯದಲ್ಲಿ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶವಿದ್ದು , ನೀವು ಆ ರೀತಿ ಮಾಡುವಂತಿಲ್ಲ ಎಂದು ಹೇಳಿದ್ದರು ಸಹ, ಆರೋಪಿಗಳು ನನ್ನ ಮಗನಿಗೆ ಅವಾಚ್ಯ ಶಬ್ದದಿಂದ ಬೈದು ಅವಮಾನ ಮಾಡಿರುತ್ತಾರೆ . 1 ನೇ ಆರೋಪಿಯು ಇತರೆ ಆರೋಪಿಗಳ ಜೊತೆಗೆ ಕುಮಕ್ಕು ನೀಡಿ ನನ್ನ ಖಾಲಿ ನಿವೆಶನವನ್ನು ಲಪಟಾಯಿಸಲು ಒಳಸಂಚು ಮಾಡಿರುತ್ತಾರೆ . ಹಾಗೆಯೇ 1 ನೇ ಆರೋಪಿಯು ನನ್ನ ನಿವೇಶನಕ್ಕೆ ಸಂಬಂಧಪಡದ ಒಂದು ನಕಾಶೆಯನ್ನು ತಂದು ನನ್ನ ನಿವೇಶನದಲ್ಲಿ ರಸ್ತೆ ಬರುತ್ತದೆ ಎಂದು ಇತರ ಆರೋಪಿಗಳಿಗೆ ಕುಮಕ್ಕು ನೀಡಿರುತ್ತಾರೆ . ನಂತರ 9 ಮತ್ತು 10 ನೇ ಆರೋಪಿಗಳು 2 ನೇ ಆರೋಪಿ ಜೊತೆಗೂಡಿ ಯಾವುದೇ ಮುನ್ಸೂಚನೆಯನ್ನು ನೀಡದೇ ಏಕಾಏಕಿ ನಮ್ಮ ಮನೆ ಒಳಗೆ ಅಕ್ರಮವಾಗಿ ಪ್ರವೇಶ ಮಾಡಿರುತ್ತಾರೆ . ನಂತರ ನನ್ನ ಖಾಲಿ ನಿವೇಶನಕ್ಕೆ ಅಳವಡಿಸಿದ್ದ ತಂತಿಬೇಲಿಯನ್ನು ಜಖಂಗೊಳಿಸಿರುತ್ತಾರೆ . ನಂತರ 1 ರಿಂದ 4 ನೇ ಆರೋಪಿಗಳು ನನ್ನ ಹಿರಿಯ ಮಗ ಸುಂದರ್ ರಾಜ್ ಮತ್ತು ನನ್ನ ಹೆಂಡತಿಯ ಮೇಲೆ ಹಲ್ಲೆ ನಡೆಸಿರುತ್ತಾರೆ . ಉಳಿಕೆ ಆರೋಪಿಗಳು ಅವರಿಗೆ ಸಹಾಯ ಮಾಡಿರುತ್ತಾರೆ . ನಂತರ ನನ್ನ ಮಗ ಮತ್ತ ನನ್ನ ಹೆಂಡತಿ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತಾರೆ . ನಂತರ ನಗರ ಪೋಲೀಸ್ ಠಾಣೆಯವರು ಆಸ್ಪತ್ರೆಗೆ ಬಂದು ನನ್ನ ಮಗ ಮತ್ತು ಹೆಂಡತಿಯ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ . ನಂತರ ನಾನು ಸ್ಥಳಕ್ಕೆ ಬಂದು ನೋಡಲಾಗಿ 9 ಕಲ್ಲುಕಂಬಗಳನ್ನು ಹೊಡೆದು ಸುಮಾರು 2 ಸಾವಿರದಷ್ಟು ಲುಕ್ಸಾನು ಮಾಡಿರುತ್ತಾರೆ .

ಅದೇ ದಿನ ರಾತ್ರಿ ಪೊಲೀಸ್ ಠಾಣೆಗೆ ಉಪ ಆರಕ್ಷಕರಿಗೆ ನಾನು ದೂರು ನೀಡಿದ್ದು , ಅವರು ಮೇಲಾಧಿಕಾರಿಗಳ ಅನುಮತಿ ಮೇರೆಗೆ ಕ್ರಮ ಜರುಗಿಸುತ್ತೇನೆ ಎಂದು ತಿಳಿಸಿರುತ್ತಾರೆ . ಆದರೆ ಅವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಿನಾಂಕ 24.08.2013 ರಂದು ನಾನು ಆರಕ್ಷಕ ವೃತ್ತ ನಿರೀಕ್ಷಕರಿಗೆ ಮತ್ತು ಆರಕ್ಷಕ ಅಧೀಕ್ಷಕರ ಹಾಸನರವರಿಗೆ ಅಂಚೆ ಮೂಲಕ ದೂರು ನೀಡಿರುತ್ತೇನೆ . ಸದರಿ ದೂರನ್ನು ವೃತ್ತ ನಿರೀಕ್ಷಕರು ಪಡೆದುಕೊಂಡಿರುವುದಿಲ್ಲ . ಸದರಿ ದೂರನ್ನು ಆರಕ್ಷಕ ಅದೀಕ್ಷಕರು ಪಡೆದುಕೊಂಡಿದ್ದರು ಸಹ, ಆರೋಪಿಗಳ ವಿರುದ್ದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ . ಆ ನಂತರ ನಾನು ಈ ನ್ಯಾಯಾಲಯದ ಮುಂದೆ ಒಂದು ಖಾಸಗಿ ಪಿರ್ಯಾದನ್ನು ದಾಖಲಿಸಿರುತ್ತೇನೆ . ನಾನು ಈ ಹಿಂದೆ ನನ್ನ ಪ್ರಮಾಣ ಪೂರ್ವಕ ಹೇಳಿಕೆಯಲ್ಲಿ ನಿಶಾನೆಗಳಾಗಿ ಗುರುತಿಸಿಕೊಂಡಿರುವ ದಾಖಲೆಗಳನ್ನು ಅಳವಡಿಸಿಕೊಳ್ಳುತ್ತೇನೆ . ಆದ ಕಾರಣ ಆರೋಪಿಗಳ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಿ ಅವರಿಗೆ ಶಿಕ್ಷೆ ವಿಧಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ . ಸದರಿ ಘಟನೆ ಪ್ರತ್ಯಕ್ಷದರ್ಶಿಗಳಾದ ಆದರ್ಶ , ಕಿರಣ , ಜಲೇಂದ್ರ, ಕಾರ್ತಿಕ್ ಗಳನ್ನು ನಾನು ಸಾಕ್ಷಿ ವಿಚಾರಣೆ ಮಾಡಿಕೊಳ್ಳುತ್ತೇನೆ .

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**